ಇಂದು ದಿ.29–05–2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀಸವಾಲುಃ– ಆರೋಪಿತರಪರ ಶ್ರೀ ಆರ್ ಕೆ ವಕೀಲರಿಂದ.

ನನ್ನ ಮಗ ಆರೋಪಿತರ ಬಳಿ ಸಾಲ ಪಡೆದುಕೊಂಡಿಲ್ಲ ಎನ್ನುವುದು ನಿಜ. ಆರೋಪಿತರು ಕೊಟ್ಟ ಸಾಲವನ್ನು ನನ್ನ ಮಗನಿಗೆ ಕೇಳಿದಾಗ ಆತ ವಾಪಸ್ ಕೊಡುತ್ತೇನೆ ಎಂದು ಹೇಳಿದ್ದು , ಈ ವಿಚಾರವಾಗಿ ಆರೋಪಿತರು ನನ್ನ ಮಗನಿಗೆ ಕಿರುಕುಳ ಕೊಟ್ಟಿಲ್ಲ ಎನ್ನುವುದು ನಿಜ. ಆಗ ಆರೋಪಿತರು ಸಂಜೆಯ ಒಳಗೆ ನೀನು ಸಾಲವನ್ನು ಮರುಪಾವತಿ ಮಾಡದಿದ್ದರೆ ನೀನು ಬದುಕಿದ್ದು ವೇಸ್ಟ್ ಎಂದು ನನ್ನ ಮುಂದೆ ಹೇಳಿಲ್ಲ ಎನ್ನುವುದು ನಿಜ. ನೀನು ಸಾಲ ಕೊಡದಿದ್ದರೆ ವಿಷ ತೆಗೆದುಕೋ , ಏನಾದೂ ಮಾಡಿಕೋ , ನಮಗೆ ಸಾಲ ಬೇಕು ಎಂದು ನನ್ನ ಮುಂದೆ ಹೇಳಿಲ್ಲ ಎನ್ನುವುದು ನಿಜ. ಆರೋಪಿತರು – ನಾನು ಸಾಲ ವಾಪಸ್ ಕೊಡುತ್ತೇನೆ , ನನ್ನ ಮಗನಿಗೆ ಸತಾಯಿಸಬೇಡಿ ಎಂದು ಎರಡು ಮೂರು ಸಾರಿ ನಾನು ಹೇಳಿಲ್ಲ ಎನ್ನುವುದು ನಿಜ.

ಈಗ ಏಳು ವರ್ಷಗಳ ಹಿಂದೆ ಸಂಜೆ 4–00 ಗಂಟೆಗೆ ನನ್ನ ಮಗ ಮನೆಗೆ ಬಂದು ಒದ್ದಾಡುತ್ತಿದ್ದು , ವಿಷ ತೆಗೆದುಕೊಂಡಿದ್ದ ವಾಸನೆ ಬರುತ್ತಿದ್ದು, ನಂತರ ನಾನು ನನ್ನ ಮಗನನ್ನು ದಾವಣಗೆರೆ ಆಸ್ಪತ್ರೆಗೆ ಸೇರಿಸಿದ್ದು , ಚಿಕಿತ್ಸೆ ಫಲಕಾರಿಯಾಗದೇ ಆತ ಮರಣ ಹೊಂದಿದ್ದು , ನನ್ನ ಮಗನ ಸಾವಿಗೆ ಆರೋಪಿತರು  ಕಾರಣರಾಗಿರುವುದಿಲ್ಲ ಎನ್ನುವುದು ನಿಜ. ಆರೋಪಿತರಿಂದ ನನ್ನ ಮಗ ಸಾಲ ಪಡೆದಿದ್ದು , ಅದನ್ನು ವಾಪಸ್ ಕೊಡದಿದ್ದರಿಂದ ಆರೋಪಿತರು ನನ್ನ ಮಗನಿಗೆ – ನೀನು ಭೂಮಿಯ ಮೇಲೆ ಬದುಕಬೇಡ, ಸಾಯಿ ಅಂತಾ ಬೈದಿಲ್ಲ ಎನ್ನುವುದು ನಿಜ. ನನ್ನ ಮಗನ ಸಾವಿಗೂ ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಎನ್ನುವುದು ನಿಜ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ.

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಅಭಿಯೋಜನೆ ಪರವಾಗಿ ಸಾಕ್ಷಿ ನುಡಿದಿದ್ದು, ಪಾಟೀಸವಾಲಿನಲ್ಲಿ ಆರೋಪಿತರ ಪರ ಸಾಕ್ಷಿ ನುಡಿಯುತ್ತಿದ್ದದ್ದು ಏಕೆ ಅಂತಾ ಕೇಳಿದ್ದಕ್ಕೆ ಸಾಕ್ಷಿ ನ್ಯಾಯಾಲಯದ ಹೊರಗಡೆ ರಾಜಿಯಾಗಿರುತ್ತೇವೆ ಎಂದು ಉತ್ತರಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

ಸಹಿ/-

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ದಾವಣಗೆರೆ.